ಗ್ರಾಮ ಪಂಚಾಯತ್ ಅಧ್ಯಕ್ಷರ ಅಧಿಕಾರ ಹಾಗೂ ಅನುದಾನ

551 (933) ಶ್ರೀ ತನ್ವೀರ್ ಸೇಠ್ (ನರಸಿಂಹರಾಜ) : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) 2010–11ನೇ ಸಾಲಿನಲ್ಲಿ ಪ್ರತಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯಿತಿಗಳಿಗೆ ನೀಡುತ್ತಿರುವ ಅನುದಾನವೆಷ್ಟು;

ಆ) 2010–11ನೇ ಸಾಲಿನಲ್ಲಿ ಗ್ರಾಮ ಪಂಚಾಯತ್ ಅಧ್ಯಕ್ಷರಿಗೆ ನೀಡಿರುವ ಅಧಿಕಾರವೇನು (ವಿವರ ಒದಗಿಸುವುದು);

ಇ) ರಾಜ್ಯದಲ್ಲಿ ಸಾಕಷ್ಟು ಗ್ರಾಮೀಣ ಪ್ರದೇಶಗಳಲ್ಲಿ ಕುಡಿಯುವ ನೀರಿನ ಅಭಾವ ಉಂಟಾಗುವ ಪರಿಸ್ಥಿತಿ ಎದುರಾಗಬಹುದು; ಈ ಬಗ್ಗೆ ಸರ್ಕಾರ ತೆಗೆದುಕೊಂಡಿರುವ ಮುಂಜಾಗ್ರತಾ ಕ್ರಮವೇನು;

ಈ) ಉದ್ಯೋಗ ಖಾತ್ರಿ ಯೋಜನೆಯಡಿಯಲ್ಲಿ ನೆರೆ ಸಂತ್ರಸ್ತರಿಗೆ ಕೆಲಸ ನೀಡಿ ಅವರಿಗೆ ನೀಡಬೇಕಾಗಿದ್ದ ಕೋಟ್ಯಾಂತರ ರೂಪಾಯಿ ಅವ್ಯವಹಾರಗಳ ವಿರುದ್ಧ ಹಾಗೂ ಅಧಿಕಾರಿಗಳ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮವೇನು (ಜಿಲ್ಲಾವಾರು ಮಾಹಿತಿ ಒದಗಿಸುವುದು)?

ಶ್ರೀ ಜಗದೀಶ್ ಶೆಟ್ಟರ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು) :

ಅ) 13ನೇ ಹಣಕಾಸು ಆಯೋಗದಡಿ 2010–11ನೇ ಸಾಲಿಗೆ ಪ್ರತಿ ಗ್ರಾಮ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಜಿಲ್ಲಾ ಪಂಚಾಯತ್‌ಗಳ ಬ್ಯಾಂಕ್ ಖಾತೆಗಳಿಗೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ರವರಿಂದ ನೇರವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದೆ. (ಅನುಬಂಧದಲ್ಲಿ ವಿವರ ನೀಡಲಾಗಿದೆ.)

ಶಾಸನಬದ್ಧ ಅನುದಾನದಡಿ 2010–11ನೇ ಸಾಲಿಗೆ ಪ್ರತಿ ಗ್ರಾಮ ಪಂಚಾಯಿತಿಗೆ ರೂ.6.00 ಲಕ್ಷಗಳನ್ನು ನೀಡಬೇಕಾಗಿದ್ದು, ಇದುವರೆವಿಗೂ ಪ್ರತಿ ಗ್ರಾಮ ಪಂಚಾಯಿತಿಗೆ ರೂ. 4.50 ಲಕ್ಷಗಳನ್ನು ನೀಡಿರುತ್ತಾರೆ. ಒಟ್ಟು ರೂ. 253.26 ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ.

ಆ) ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 62ರ ಪ್ರಕಾರ ಗ್ರಾಮ ಪಂಚಾಯತ್ ಅಧ್ಯಕ್ಷರು ಈ ಕೆಳಗಿನಂತೆ ಅಧಿಕಾರವನ್ನು ಚಲಾಯಿಸ ಬಹುದಾದಂಥ ವಿಷಯಗಳು:

ಅ. ಗ್ರಾಮ ಪಂಚಾಯತಿಯ ಸಭೆಗಳನ್ನು ಕರೆಯತಕ್ಕದ್ದು

ಆ. ಗ್ರಾಮ ಪಂಚಾಯತಿಯ ದಾಖಲೆಗಳನ್ನು ನೋಡುವ ಅವಕಾಶವಿರತಕ್ಕದ್ದು.

ಇ. ಗ್ರಾಮ ಪಂಚಾಯತಿಯ ಅಧಿಕಾರಿಗಳ ಮತ್ತು ನೌಕರರ ಕಾರ್ಯಗಳ ಮೇಲೆ ಮೇಲ್ವಿಚಾರಣೆ ನಡೆಸತಕ್ಕದ್ದು.

ಈ. ಗ್ರಾಮ ಪಂಚಾಯತಿಯ ನಿಯಂತ್ರಣದಲ್ಲಿರುವ ಯಾವೊಬ್ಬ ಅಧಿಕಾರಿಯನ್ನು ಒಂದು ಮೊಕದ್ದಮೆಯ ಸಂಬಂಧದಲ್ಲಿ ತನಿಖೆ/ ಅಮಾನತ್ತಿನಲ್ಲಿಡಲು ಅಧಿಕಾರ ಹೊಂದಿರತಕ್ಕದ್ದು.

ಇ) ಮುಂಬರುವ ಬೇಸಿಗೆಯಲ್ಲಿ 4497 ಗ್ರಾಮೀಣ ಜನವಸತಿಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಉದ್ಭವಿಸುವ ಸಂಭವವಿದೆಯೆಂದು, ತುರ್ತು ಕ್ರಿಯಾ ಯೋಜನೆಯನ್ನು ರೂ. 151.00 ಕೋಟಿ ಅಂದಾಜಿನಲ್ಲಿ ಸಿದ್ಧಪಡಿಸಿ ಹೆಚ್ಚುವರಿ ಅನುದಾನಕ್ಕಾಗಿ ಭಾರತ ಸರ್ಕಾರಕ್ಕೆ ಪ್ರಸ್ತಾಪ ಸಲ್ಲಿಸಿದೆ. ಇದಲ್ಲದೆ ಕುಡಿಯುವ ನೀರಿನ ಸಮಸ್ಯೆಯಾದಲ್ಲಿ ಜಿಲ್ಲಾಧಿಕಾರಿಗಳ ಸಮನ್ವಯದಲ್ಲಿ ಸಾಗಾಣಿಕೆ ಮುಖೇನ ನೀರು ಪೂರೈಕೆ ಮಾಡುವುದು, ಖಾಸಗಿ ಬೋರ್ ವೆಲ್‌ಗಳ ಸೇವೆ ಪಡೆಯುವುದು ಸೇರಿದಂತೆ ಸ್ಥಳೀಯವಾಗಿ ಜಿಲ್ಲಾ ಪಂಚಾಯತ್‌ಗಳು ಅಗತ್ಯ ಕ್ರಮಕೈಗೊಳ್ಳಲಿವೆ. ತಾಲ್ಲೂಕು ಮಟ್ಟದ ಕಂಟ್ರೋಲ್ ರೂಂಗಳನ್ನು ಚುರುಕುಗೊಳಿಸಿ, ಕುಡಿಯುವ ನೀರಿನ ದೂರುಗಳಿಗೆ ಸಂಬಂಧಿಸಿದಂತೆ ಮೊದಲ ಆದ್ಯತೆಯಲ್ಲಿ ಸ್ಪಂದಿಸಿ, ಹಾಲಿಯಿರುವ ಯೋಜನೆಗಳ ಪುನಃಶ್ಚೇತನ ಸೇರಿದಂತೆ ಅಗತ್ಯ ಕ್ರಮ ಕೈಗೊಳ್ಳತಕ್ಕದ್ದೆಂದು ಈಗಾಗಲೇ ಜಿಲ್ಲಾ ಪಂಚಾಯತ್‌ಗಳಿಗೆ ನಿರ್ದೇಶನ ನೀಡಲಾಗಿದೆ.

ಈ) ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನವನ್ನು ಉದ್ಯೋಗದ ಬೇಡಿಕೆಗೆ ಅನುಗುಣವಾಗಿ ವರ್ಷಪೂರ್ತಿ ನಿರ್ವಹಿಸಲಾಗುತ್ತಿದೆ. ನೆರೆ ಹಾವಳಿಯ ಸಂದರ್ಭದಲ್ಲಿ ಅನುಷ್ಠಾನಾಧಿಕಾರಿಗಳು ಯೋಜನೆಯನ್ನು ಚುರುಕುಗೊಳಿಸಿ ಗ್ರಾಮೀಣ ಜನರು ವಲಸೆ ಹೋಗದಂತೆ ಬೇಡಿಕೆ ಆಧಾರದ ಮೇಲೆ ಉದ್ಯೋಗವನ್ನು

ನಿರಾಕರಿಸದೆ ನೀಡಲಾಗುತ್ತಿದೆ. ಯೋಜನೆಯ ಅನುಷ್ಟಾನದ ಯಾವುದೇ ಸಂದರ್ಭದಲ್ಲಿ ಹಣದುರುಪಯೋಗದ ಮತ್ತು ಅವ್ಯವಹಾರದ ಪ್ರಕರಣಗಳು ಕಂಡುಬಂದಲ್ಲಿ ಅಂತಹವರ ವಿರುದ್ಧ ಶಿಸ್ತಿನ ಕ್ರಮ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ದಾಖಲಿಸಿ ಕ್ರಮ ಜರುಗಿಸಲಾಗುತ್ತಿದೆ. ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮದ ಜಿಲ್ಲಾವಾರು ಮಾಹಿತಿಯನ್ನು ಅನುಬಂಧ ದಲ್ಲಿ ಒದಗಿಸಿದೆ.

ಅನುಬಂಧ

2010–11 ನೇ ಸಾಲಿನಲ್ಲಿ 13ನೇ ಹಣಕಾಸು ಆಯೋಗದಡಿ ಬಿಡುಗಡೆಯಾಗಿರುವ ಅನುದಾನ

ಕ್ರಮ ಸಂಖ್ಯೆ	ಜಿಲ್ಲಾ ಪಂಚಾಯತಿಯ ಹೆಸರು	ಜಿಲ್ಲಾ ಪಂಚಾಯತಿ	ತಾಲ್ಲೂಕು ಪಂಚಾಯತಿ	ಗ್ರಾಮ ಪಂಚಾಯತಿ
1	ಬಾಗಲಕೋಟೆ	144.86	289.66	1013.82
2	ಬೆಂಗಳೂರು(ನ)	70.18	140.28	490.94
3	ಬೆಂಗಳೂರು (ಗ್ರಾ)	85.84	171.62	600.66
4	ಬೆಳಗಾಂ	230.44	460.84	1612.94
5	ಬಳ್ಳಾರಿ	172.08	344.14	1204.48
6	ಬೀದರ್	146.66	293.24	1026.32
7	ಬಿಜಾಪುರ	154.40	308.72	1080.52
8	ಚಾಮರಾಜನಗರ	101.70	203.32	711.60
9	ಚಿಕ್ಕಮಗಳೂರು	123.92	247.80	867.28
10	ಚಿತ್ರದುರ್ಗ	150.54	303.00	1060.44
11	ಚಿಕ್ಕಬಳ್ಳಾಪುರ	149.12	298.14	1043.52
12	ದಕ್ಷಿಣ ಕನ್ನಡ	79.22	158.38	554.32
13	ದಾವಣಗೆರೆ	143.82	287.56	1006.52
14	ಧಾರವಾಡ	103.84	207.64	726.74
15	ಗದಗ	109.62	219.16	767.04
16	ಗುಲ್ಬರ್ಗಾ	236.30	472.58	1654.00
17	ಹಾಸನ	170.86	341.64	1195.74
18	ಹಾವೇರಿ	163.36	326.66	1143.34
19	ಕೊಡಗು	40.64	81.18	284.16
20	ಕೋಲಾರ	113.10	226.18	791.60
21	ಕೊಪ್ಪಳ	119.34	238.64	835.20

22	ಮಂಡ್ಯ	164.82	329.54	1153.42
23	ಮೈಸೂರು	165.56	331.08	1158.80
24	ರಾಯಚೂರು	160.78	321.46	1125.14
25	ರಾಮನಗರ	102.10	204.10	714.38
26	ಶಿವಮೊಗ್ಗ	138.80	277.50	971.28
27	ತುಮಕೂರು	265.58	531.10	1858.86
28	ಉಡುಪಿ	48.56	97.02	339.58
29	ಉತ್ತರ ಕನ್ನಡ	238.64	477.24	1670.36
30	ಯಾದಗಿರಿ	99.12	198.18	693.60
	ಒಟ್ಟು	**4193.80**	**8387.60**	**29356.60**

ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಅನುಷ್ಠಾನದಡಿ ಕಂಡುಬಂದ ಅವ್ಯವಹಾರಗಳ ಪ್ರಕರಣಗಳಲ್ಲಿ ಅಧಿಕಾರಿಗಳ ವಿರುದ್ಧ ಕೈಗೊಂಡಿರುವ ಕ್ರಮದ ಜಿಲ್ಲಾ ಮಾಹಿತಿಯ ವಿವರದ ತಃಖ್ತೆ

ಕ್ರ ಸಂ.	ಜಿಲ್ಲೆ	ಅವ್ಯವಹಾರದಲ್ಲಿ ಭಾಗಿಯಾಗಿರುವ ಅಧಿಕಾರಿಗಳ ವಿರುದ್ಧ ಕ್ರಮ ಜರುಗಿಸಿದ ಸಂಖ್ಯೆ
1	ಬಾಗಲಕೋಟೆ	6
2	ಬೆಂಗಳೂರು(ನ)	5
3	ಬೆಂಗಳೂರು (ಗ್ರಾ)	12
4	ಬೆಳಗಾಂ	5
5	ಬಳ್ಳಾರಿ	7
6	ಬೀದರ್	26
7	ಬಿಜಾಪುರ	20
8	ಚಾಮರಾಜನಗರ	20
9	ಚಿಕ್ಕಬಳ್ಳಾಪುರ	28
10	ಚಿಕ್ಕಮಗಳೂರು	
11	ಚಿತ್ರದುರ್ಗ	29
12	ದಾವಣಗೆರೆ	23

13	ಧಾರವಾಡ	13
14	ದಕ್ಷಿಣ ಕನ್ನಡ	1
15	ಗದಗ	3
16	ಗುಲ್ಬರ್ಗಾ	22
17	ಹಾಸನ	10
18	ಹಾವೇರಿ	13
19	ಕೊಡಗು	4
20	ಕೋಲಾರ	18
21	ಕೊಪ್ಪಳ	24
22	ಮಂಡ್ಯ	18
23	ಮೈಸೂರು	14
24	ರಾಯಚೂರು	13
25	ರಾಮನಗರ	4
26	ಶಿವಮೊಗ್ಗ	15
27	ತುಮಕೂರು	18
28	ಉಡುಪಿ	1
29	ಉತ್ತರ ಕನ್ನಡ	1
30	ಯಾದಗಿರಿ	5
	ಒಟ್ಟು	**378**

ಸಂಡೂರು ತಾಲ್ಲೂಕಿನಲ್ಲಿ ಪ್ರೌಢಶಾಲೆ ಮತ್ತು ಪದವಿ ಪೂರ್ವ ಕಾಲೇಜು ಮಂಜೂರಾತಿ

552 (483) ಶ್ರೀ ತುಕಾರಾಮ್. ಇ (ಸಂಡೂರ್) : ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಂಡೂರು ತಾಲ್ಲೂಕಿಗೆ ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲಿ ಹೊಸದಾಗಿ ಪ್ರೌಢಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳನ್ನು ಮಂಜೂರು ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;